MYSORE LEGISLATIVE ASSEMBLY

THIRTEENTH DAY

Friday, 18th December 1959.

The House met in the Assembly Hall, Vidhana Soudha, Bangalore, at One of the Clock.

MR. SPEAKER (SRI S. R. KANTHI, B.A., LL.B.) in the Chair.

STARRED QUESTIONS

(to which oral answers were given)

Complaint against the Director of Veterinary and Animal Husbandry regarding Free Supply of Milk.

*Q.—7. Sri N. G. NARASIMHE GOWDA (Sravanabelagula) [on behalf of SRI E. NARAYANA GOWDA (Bangarpet)].—

Will the Government be pleased to state :—

(*a*) whether the complaint that the Director of Veterinary and Animal Husbandry Services is getting free supply of milk from the Government Dairy to his office and house in the Government van is true ;

(*b*) whether it is a fact that the Anti-Corruption Department has investigated this matter ?

A.—Sri N. RACHIAH (Minister for Agriculture, Excise and Social Welfare).—

(*a*) No.

(*b*) It is still under investigation.

ಶ್ರೀ ಎಚ್. ಜಿ. ನರಸಿಂಹೇಗೌಡ.—ಈ ಅನಿಮಲ್ ಹಸ್ಬೆಂಡಿರಿ ಇಲಾಖೆಯ ಡೈರೆಕ್ಟರವರು ಎಷ್ಟು ದಿವಸಗಳಿಂದ ಸರ್ಕಾರದ ಡೈರಿಯಿಂದ ಹಾಲನ್ನು ತರಿಸಿಕೊಳ್ಳುತ್ತಿದ್ದರು ?

ಅಧ್ಯಕ್ಷರು.—ಇಲ್ಲ ಎಂದು ಹೇಳಿದ್ದಾರೆ, ಉತ್ತರದಲ್ಲಿ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಆಂಟಿಕರಪ್ಷನ್ ಇಲಾಖೆಯವರು ಯಾವ ರೀತಿಯಲ್ಲಿ ಈ ಕೇಸನ್ನು ಎಕ್ಸೈಮೈರಿ ಮಾಡುತ್ತಿದ್ದಾರೆ ?

†ಶ್ರೀ ಎನ್. ರಾಚಯ್ಯ.—ಈಗಿನ್ನೂ ಈ ಕೇಸನ್ನು ಅವರು ಇನ್‌ವೆಸ್ಟಿಗೇಟ್ ಮಾಡುತ್ತಿದ್ದಾರೆ. ಆ ರಿಪೋರ್ಟ್ ಬಂದ ಮೇಲೆ ಆ ವಿಚಾರ ನಮಗೆ ಗೊತ್ತಾಗಬೇಕು.

ಶ್ರೀ ಎನ್. ಜಿ. ನರಸಿಂಹೇಗೌಡ.—ಅವರು ಹಾಗೆ ಇನ್‌ವೆಸ್ಟಿಗೇಟ್ ಮಾಡಲು ಕಾರಣವೇನು ?

ಶ್ರೀ ಎನ್. ರಾಚಯ್ಯ.—ಆ ಇಲಾಖೆಯವರು 1959 ಅಕ್ಟೋಬರ್ 7ರಂದು ಒಂದು ನರ್‌ಪ್ರೈಸ್ ವಿಜಿಟ್ ಮಾಡಿದ್ದಾಗ ಯಾವುದೋ ಒಂದು ಸ್ಥಳದಲ್ಲಿ ಲೇಬರ್ ಹಾಕಿದ್ದ ಡಬ್ಬಗಳಲ್ಲಿ ಅರ್ಧ ಪೌಂಡ್ ಹಾಲಿರುತ್ತದೆಂದು ಲೇಬಲ್ ಹಾಕಿದ್ದುದರಲ್ಲಿ ಒಂದೂಮುಕ್ಕಾಲು ಪೌಂಡು ಹಾಲು ಜಾಸ್ತಿಯಾಗಿತ್ತೆಂದೂ ಹೇಳಿ ತಿಳಿಸಿದ್ದಾರೆ.

ಶ್ರೀ ಎನ್. ಜಿ. ನರಸಿಂಹೇಗೌಡ.—ಈ ವಿಚಾರಣೆ ಮುಗಿಸಲು ಇನ್ನೂ ಎಷ್ಟು ದಿನಗಳು ಬೇಕು ?

ಶ್ರೀ ಎನ್. ರಾಚಯ್ಯ.—ಸಾಧ್ಯವಾದಷ್ಟು ಜಾಗ್ರತೆ ಮುಗಿಸುತ್ತಾರೆ.

ಶ್ರೀ ಎನ್. ಜಿ. ನರಸಿಂಹೇಗೌಡ.—ಅವರ ಮೇಲೆ ಏನು ಆಕ್ಷನ್ ತೆಗೆದುಕೊಳ್ಳುತ್ತಾರೆ ?

ಶ್ರೀ ಎನ್. ರಾಚಯ್ಯ.—ಅದನ್ನೀಗಲೇ ಹೇಗೆ ಹೇಳುವುದಕ್ಕಾಗುತ್ತದೆ ?

Sri G. N. PUTTANNA.—Are the Government aware that he has been purchasing milk from the Government Dairy and that he has been paying for it ?

Sri N. RACHIAH.—Government are not aware.

ಶ್ರೀ ಎಂ. ರಾಮಪ್ಪ.—ಉತ್ತರದಲ್ಲಿ (ಎ)ಗೆ ಇಲ್ಲವೆಂದು ಹೇಳಿ (ಬಿ)ಗೆ ಇನ್‌ವೆಸ್ಟಿಗೇಟ್ ಮಾಡುತ್ತಿದ್ದರೆಂದು ಉತ್ತರ ಕೊಟ್ಟರತಕ್ಕದ್ದನ್ನು ನೋಡಿದರೆ ಅಲ್ಲಿ ಈಗ ಇನ್‌ವೆಸ್ಟಿಗೇಟ್ ಮಾಡುತ್ತಿರುವವರಿಗೊಂದು ಇದರಿಂದ ಮುಂದೇನು ಮಾಡಬೇಕೆಂಬ ಸೂಚನೆಯನ್ನು ಕೊಟ್ಟಂತಾಗುವುದರಿಂದ ಹೀಗೆ ಉತ್ತರ ಕೊಟ್ಟರತಕ್ಕದ್ದು ತಪ್ಪಲ್ಲವೇ ?

† Indicates that the remarks or speeches have not been revised by the member concerned.

ಶ್ರೀ ಎನ್. ರಾಚಯ್ಯ.—ನಾವೀಗಲೇ ಅವರ ಮೇಲೊಂದು ನಿರ್ದಿಷ್ಟವಾದ ಆಪಾದನೆ ಹೊರಿಸುವುದಕ್ಕೆ ಬದಲಾಗಿ ಈ ಹೊಣೆಗಾರಿಕೆಯನ್ನೂ, ಆ ಜವಾಬ್ದಾರಿಯನ್ನೂ ಅವರ ಮೇಲೆ ಹಾಕಬೇಕೆಂಬ ಉದ್ದೇಶದಿಂದ ಈ ರೀತಿ ಉತ್ತರ ಕೊಡಲಾಗಿದೆ.

Sri C. J. MUCKANNAPPA.— In answer to (*b*) it is said : 'It is still under investigation'. What is it that is under investigation ?

Sri N. RACHIAH.—With regard to the charge that is contemplated by the Hon'ble Member who tabled the question, I cannot say that the Director is guilty of that unless it is proved after the investigation; that is the meaning of that reply.

Sri K. MALLAPPA.—With reference to (*a*), may I know to whom the complaint has been made ?

Sri N. RACHIAH.-Actually there was no complaint against the Director to the Government. The complaint must have been given to the Anti-Corruption Department. So we have given this reply in that manner ; but according to the information the Government have received, the Anti-Corruption Department is seized of the matter and we have not received the complete report and as such, the reply is given in that form.

Sri C. J. MUCKANNAPPA.—Even according to the information received by the Government, it is not only about milk supply but it is also about tampering with the entire electrification of the Office of the Director, Animal Husbandry. Is it one of the factors mentioned ?

Mr. SPEAKER.—How is it relevant ?

Sri C. J. MUCKANNAPPA.—There is a complaint from the Electricity Board.

Mr. SPEAKER.-That is outside the scope of the question.

Sri C. J. MUCKANNAPPA.-When you say that the complaint has not been received by the Government, how were you able to know that the Anti Corruption Department was holding an enquiry ?

Sri N. RACHIAH.—It is only when the question was tabled, that Government called for information and therefore we are now able to know it. When after the enquiry, the full report is received by the Government, it will be known whether the Director is guilty of such an offence or not. If there any offence is proved, then Government will take suitable action ; otherwise no action is necessary.

ಶ್ರೀ ಕೆ. ಎಲ್. ನರಸಿಂಹಯ್ಯ.—ಅವರು ಡೇರಿ ಫಾರಂನಿಂದ ಹಾಲನ್ನು ತರುತ್ತಿದ್ದಾಗಲೇ ದಾರಿಯಲ್ಲಿ ಈ ಕೇಸನ್ನು ಹಿಡಿದರೋ ಅಥವಾ ಅವರು ನೀರು ಬೆರಸಿದ ಮೇಲೆ ಹಿಡಿದರೋ ?

Sri N. RACHIAH.—This is according to the information furnished by the Office of the Director, Animal Husbandry.

ಶ್ರೀ ಕೆ. ಎಲ್. ನರಸಿಂಹಯ್ಯ.-ಅವರು ಕಾಫಿ, ಟೀ ಮಾಡಿದ ನಂತರ ಹಿಡಿದರೋ ಅಥವಾ ಹಾಗೆ ಆ ಹಾಲನ್ನು ನೀರಿಗೆ ಬೆರಸುವುದಕ್ಕೆ ಮುಂಚಿತವಾಗೇ ಹಿಡಿದರೋ ?

Sri N. RACHIAH.—That information is not available.

ಶ್ರೀ ಎನ್. ಜಿ. ನರಸಿಂಹೇಗೌಡ.-ಆಂಟೀಕರಪ್ಷನ್ ಇಲಾಖೆಯವರು ಎಷ್ಟು ಸೇರು ಹಾಲನ್ನು ಹಿಡಿದರು ? ಅದಕ್ಕೆ ಅವರು ದುಡ್ಡು ಕೊಟ್ಟಿದ್ದರೇ ?

ಶ್ರೀ ಎನ್. ರಾಚಯ್ಯ.—ಅವರ ಮನೆಯಲ್ಲಿ ನುಮಾರು ಎರಡು ತಿಂಗಳ ಕಾಲ ಯಾರೂ ಇರಲಿಲ್ಲ ವೆಂಬ ಕಾರಣದಿಂದ ಆಫೀಸಿನಿಂದ ಹಾಲನ್ನು ತರಿಸಿ ಕೊಳ್ಳುತ್ತಿದ್ದರೆಂದು ವರದಿಯಲ್ಲಿ ತಿಳಿಸಿದೆ.

Sri G. SIVAPPA.—Clause (*a*) of the question reads : whether the complaint that the Director is getting free supply of milk is true ? The answer furnished to this is 'No'. This answer is not correct.

Sri N. RACHIAH.—I have already answered this supplementary question.

Establishment of Munsiff-Magistrate Court at Arsikere.

**Q.*—32. Sri A. R. KARISIDDAPPA (Arsikere).—

Will the Government be pleased to state :—

(*a*) since how long the people of Arsikere taluk are representing to the Government to establish a Munsiff-Magistrate Court at Arsikere ;

(*b*) whether it is not a fact that Sri Mallappa's Committee has given a favourable opinion about this ;

(*c*) if so, the reasons for not establishing the same at the above place ?

A.—Sri B. D. JATTI (Chief Minister).-

(*a*) From a long time.